ಓ.ಎಸ್. ನಂಃ **179/2010**
ಡಿ.ಡಬ್ಲ್ಯೂಃ **1**

ದಿನಾಂಕ **07-02-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್.ಹೆಚ್.ಎಂ.ಜಿ ವಕೀಲರಿಂದಃ

28. ನಿಡಿ-24 ರ ದಾಖಲೆ ಕಾನೂನು ಬಾಹೀರ ಹಾಗೂ ಸುಳ್ಳು ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ದೊಡ್ಡಮ್ಮ ಹಾಗೂ ಅವರ ವಾರಸುದಾರರನ್ನು ಸದರಿ ದಾಖಲೆಗೆ ಪಕ್ಷಗಾರರನ್ನಾಗಿ ಮಾಡದೇ ಅವರ ಪಾಲಿನ ಆಸ್ತಿಯನ್ನು ಕಬಳಿಸಲು ಸದರಿ ದಾಖಲೆ ಸೃಷಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಾಯಿ ಹಾಗೂ ಸಹೋದರರು ಸೇರಿಕೊಂಡು ನನ್ನ ತಂದೆಗೆ ಮೋಸ ಮಾಡಿ ಸದರಿ ಸುಳ್ಳು ದಾಖಲೆ ಸೃಷಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಯ ಸಾಕ್ಷಿದಾರ ನಾರಾಯಣರಾವ್ ರವರು ನನ್ನ ಸ್ವಂತ ಅಕ್ಕನ ಗಂಡ ಆಗಿರುತ್ತಾರೆ ಎಂದರೆ ಸರಿ. ಅದೇ ರೀತಿ ಇನ್ನೊಬ್ಬ ಸಾಕ್ಷದಾರ ಕಿಷ್ಟಪ್ಪ ನಿಮ್ಮ ತಾಯಿಯ ಸೋದರ ಅತ್ತೆ ಮಗ ಆಗಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿಯವರನ್ನು ದುರ್ಬಳಕೆ ಮಾಡಿಕೊಂಡು ದಾಖಲೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಯಾರು ಬರೆದಿದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆ ಮಾಡಿಸಿದ್ದರು ಹಾಗಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆ ತಯಾರಿಸಲು ನನ್ನ ತಂದೆ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ.

29. ನಿಡಿ-24 ರ ವಿಭಾಗ ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ವಾದಿಯು ದಾವಾ ಆಸ್ತಿಯ ಖಾತಾ ವರ್ಗಾವಣೆಗೆ ತಹಸಿಲ್ದಾರ ಕಚೇರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಖೊಟ್ಟಿ ಸಹಿ ಮಾಡಿ ನೀವು ಸದರಿ ಅರ್ಜಿಗೆ ತಕರಾರು ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ನನ್ನ ತಂದೆ ಖುದ್ದು ತಾವೇ ತಕರಾರು ಸಲ್ಲಿದ್ದರು ಎಂದು ನುಡಿಯುತ್ತಾರೆ. ಆ ನಂತರ ಕಂದಾಯ ನ್ಯಾಯಾಲಯದಿಂದ ವಾದಿ ಹಾಗೂ ಅವರ ಸಹೋದರರಿಗೆ ನೋಟಿಸ್ ಕಳುಹಿಸಲಾಗಿತ್ತು ಎಂದರೆ ಸರಿಯಲ್ಲ. ಸದರಿ ನೋಟಿಸ್ ನನಗೆ ಜಾರಿ ಮಾಡಿಲ್ಲ ಅದನ್ನು ಎಂ.ಕೆ ವಜೀರ್ ವಕೀಲರು ತೆಗೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಂಬಂದ ಪಟ್ಟವರಿಗೆ ನೋಟಿಸ್ ಜಾರಿಯಾಗದಂತೆ ನೋಡಿಕೊಂಡು ನಾವುಗಳು ವಾದಿಯಿಂದ ದಾವಾ ಆಸ್ತಿಯ ಸ್ವಾಧೀನ ಪಡೆದುಕೊಳ್ಳಲು ಪ್ರಯತ್ನಿಸಿದ್ದರಿಂದ ಈ ದಾವೆ ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. (ನೀವು ಒಬ್ಬ ವಕೀಲರಾಗಿ

ಅದರ ದುರ್ಬಳಕೆ ಮಾಡಿಕೊಂಡು ನ್ಯಾಯಾಲಯದಲ್ಲಿ ಗೊತ್ತಿಲ್ಲ, ಸರಿಯಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೀರಿ ಎಂದು ವಕೀಲರು ಸಾಕ್ಷಿಗೆ ಸೂಚಿಸಿದ್ದು, ಅದು ಈ ದಾವೆಗೆ ಸಂಬಂದಸಿರದ ಅಂಶ ಎಂದು ಸಾಕ್ಷಿಯ ಹೇಳಿಕೆಯಲ್ಲಿ ತೆಗೆದುಕೊಂಡಿರುವುದಿಲ್ಲ. ನನ್ನ ಅಜ್ಜ ಮಲ್ಲಪ್ಪ ಹಾಗೂ ನನ್ನ ತಂದೆ ಹೊನ್ನಪ್ಪ ರವರ ವಿಚಾರಗಳ ವಿರುದ್ದ ಹಾಗೂ ಅವರು ಸಲ್ಲಿಸಿದ ದಾಖಲೆಗಳನ್ನು ನಾಶಪಡಿಸಲು ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ 20 ಎಕರೆ 07 ಗುಂಟೆ ಹಾಗೂ ಸರ್ವೆ ನಂ.4 ರ 08 ಎಕರೆ 01 ಗುಂಟೆ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವೆಯ ವಿಷಯಗಳನ್ನು ದಾರಿ ತಪ್ಪಿಸಲು ಸುಳ್ಳು ದಾಖಲೆ ಸೃಷ್ಟಿಸಿ ಹಾಜರು ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಜಮೀನು ವಿಭಾಗದಲ್ಲಿ ವಾದಿಯ ಪಾಲಿಗೆ ಹೋಗಿದ್ದು ಆಗಿನಿಂದ ಈವರೆಗೆ ವಾದಿಯೇ ಸ್ವಾಧೀನದಲ್ಲಿ ಇದ್ದರೂ ಸಹ ದಾವೆಯಲ್ಲಿ ಗೊಂದಲ ಉಂಟುಮಾಡುವ ಉದ್ದೇಶದಿಂದ ಸುಳ್ಳು ದಾಖಲೆ ಹಾಜರು ಮಾಡಿದ್ದೇನೆಂದರೆ ಸರಿಯಲ್ಲ. ಈ ದಾವೆಯನ್ನು ಹಾಳು ಮಾಡುವ ಉದ್ದೇಶದಿಂದ ನಾನು ನನ್ನ ಸಹೋದರನ ಕಡೆಯಿಂದ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಒ.ಎಸ್ ನಂ.107/2023 ರನ್ನು ದಾಖಲು ಮಾಡಿಸಿದ್ದೇನೆಂದರೆ ಸರಿಯಲ್ಲ. ನನ್ನ ಚಿಕ್ಕಪ್ಪಂದಿರು ವಿಭಾಗದ ಪ್ರಕಾರ ಹೆಸರು ವರ್ಗಾವಣೆಗೆ ಸಲ್ಲಿಸಿದ ಅರ್ಜಿಗಳು ಕಂದಾಯ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇದ್ದಾವೆ ಎಂದರೆ ಸಾಕ್ಷಿಯು ಎಲ್ಲಾ ಅರ್ಜಿಗಳು ವಜಾ ಆಗಿದ್ದಾವೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಗೊತ್ತಿಲ್ಲದಂತೆ ನಿಡಿ-24 ರ ದಾಖಲೆಯನ್ನು ನಾವು ಸೃಷ್ಟಿಸಿಕೊಂಡಿದ್ದರಿಂದ ಅದು ಅವರಿಗೆ ಗೊತ್ತಾಗಿ ಘರ್ಷಣೆ ಆಗಿದ್ದರಿಂದ ಅವರು ಹೃದಯಗಾತವಾಗಿ ಮರಣಹೊಂದಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ